# ಲೋಕಪ್ರಿಯ ಬಂಟರ ನೆನಪು



ಕೆಳದಿ–ಇಕ್ಕೇರಿ ರಾಜ್ಯದ ಅರಸರಿಗೆ ಪ್ರಿಯರಾಗಿದ್ದ, ಹತ್ತು ಹಲವು ಸಂದರ್ಭಗಳಲ್ಲಿ ಅರಮನೆ, ಸಾಮ್ರಾಜ್ಯ ರಕ್ಷಿಸಿದ್ದ ಬಂಟರಿಬ್ಬರ ಮರದ ಪ್ರತಿಮೆಗಳಿವು. ಕೆಳದಿಯ ವೀರಭದ್ರ ದೇವಾಲಯದ ಪ್ರಾಂಗಣದಲ್ಲಿವೆ. ದೇವಾಲಯಕ್ಕೆ ಬರುವ ಭಕ್ತರು, ಪ್ರವಾಸಿಗರ ಆಕರ್ಷಣೆಯಾಗಿವೆ ಈ ಪ್ರತಿಮೆಗಳು.

**–ಮಯೂರ್ ತಾಂಡೇಲ, ಗಂಗೊಳ್ಳಿ**

# ಹಳ್ಳಿಮದ್ದು ಪಾರ್ಥೇನಿಯಂ



ಕಾಡಿನಲ್ಲಿ ಪುಕ್ಕಟೆ ಸಿಗುವ ಪಾರ್ಥೇನಿಯಂ ಗಿಡದ ಪರಿಚಯ ಹೆಚ್ಚಿನವರಿಗಿದೆ. ಬಡವರ ಕಾಲದ ಹಳ್ಳಿಮದ್ದು ಎಂಬ ಹೆಸರು ಈ ಗಿಡಕ್ಕಿದ್ದು, ಇದರ ತುದಿ, ಚಿಗುರು ಅಥವಾ ಎಲೆಯನ್ನು ಕಲ್ಲಿನಲ್ಲಿ ಗುದ್ದಿ ಗಾಯಕ್ಕೆ ತಾಗಿಸಿದರೆ ಗಾಯ ತಕ್ಷಣ ಗುಣಮುಖವಾಗುತ್ತದೆ. ರಸಕ್ಕೆ ನೀರುಳ್ಳಿ ರಸವನ್ನು ಬೆರೆಸಿ ಗಾಯಕ್ಕೆ ಕಟ್ಟಿದರೆ ರಕ್ತಸ್ರಾವ ನಿಂತು ಹೋಗುತ್ತದೆ. ಎರಡು ಮೂರು ವರ್ಷಗಳವರೆಗೆ ಬದುಕುತ್ತದೆ ಈ ಪಾರ್ಥೇನಿಯಂ ಗಿಡ.

**–ಪ್ರೇಮ ಪಿ. ಕಾಯರ್ತಡ್ಕ, ಪಾಂಗಾಳ ಮನೆ**

# ದಾಹ ನೀಗಿಸುವ ಆಟೋ ಚಾಲಕ

ರಾಯಚೂರಿನ ಬೇಸಿಗೆ ಬಿಸಿಲನ್ನು ಒಮ್ಮೆ ನೆನಪಿಸಿಕೊಂಡರೆ ಸಾಕು, ಮೈ ಜುಂ ಎನ್ನುತ್ತದೆ. ಬಿಸಿಲಲ್ಲಿ ಹೋದರೆ ಗಂಟಲು ಒಣಗಿ ಬಾಯಾರುತ್ತದೆ. ದೇಹ ನೀರನ್ನು ಬಯಸುತ್ತದೆ.

ಇಂತಹವರಿಗೆಂದೇ ರಾಯಚೂರಿನ ರಾಮಕೃಷ್ಣ ಯಾದವ್ ಎಂಬ ಆಟೋ ಚಾಲಕ ಬೇಸಿಗೆಯಲ್ಲಿ ತಂಪಾದ ನೀರಿನ ಕ್ಯಾನ್‌ಗಳನ್ನು ವಾಸವಿ ನಗರದ ಬಸ್ ನಿಲ್ದಾಣದ ಬಯಲಲ್ಲಿ ಇಟ್ಟಿದ್ದಾರೆ. ಈ ಉಚಿತ ನೀರು ಅನೇಕ ಜನರ ಬಾಯಾರಿಕೆಯನ್ನು ತಣಿಸಿದೆ. ಇವರು ಪ್ರತಿದಿನದ ಮೊದಲನೇ ಸವಾರಿಯ ಹಣವನ್ನು ಹಲವಾರು ವರ್ಷಗಳಿಂದ ಇದಕ್ಕೆ ಮೀಸಲಿಟ್ಟು ಸಮಾಜ ಸೇವೆ ಮಾಡುತ್ತಿದ್ದಾರೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಈ ಸೇವೆ ಮಾಡುತ್ತಿದ್ದು ದಿನಕ್ಕೆ ಇಪ್ಪತ್ತಕ್ಕೂ ಹೆಚ್ಚು ತಂಪಾದ ನೀರಿನ ಕ್ಯಾನ್‌ಗಳನ್ನು ಒದಗಿಸುತ್ತಿದ್ದಾರೆ.

**ಚಿತ್ರ- ಬರಹ: ಈರಣ್ಣ ಬೆಂಗಾಲಿ, ರಾಯಚೂರು**

